

ಮತ್ತು ಗಣಿತ ವಿಷಯಗಳಲ್ಲಿ ಬಿ.ಎಸ್ಸಿ. ಪದವಿ ಪಡೆದು, ಮದರಾಸಿನ ಐಐಟಿಯಿಂದ ರಸಾಯನ ವಿಜ್ಞಾನದಲ್ಲಿ ಎಂ.ಎಸ್ಸಿ. ಪದವಿ ಸಂಪಾದಿಸಿದರು. ನಂತರ ಮುಂಬೈನ ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆಯಿಂದ ಪಿಎಚ್.ಡಿ ಪಡೆದು ಅಲ್ಲಿಯೇ ಸಂಶೋಧನಾ ಸಹಾಯಕನಾಗಿ ಕೆಲಸಕ್ಕೆ ಸೇರಿಕೊಂಡರು. ಜ್ಯೂರಿಚ್ ವಿವಿಗೆ ತೆರಳಿ ಉನ್ನತ ಅಧ್ಯಯನ ಕೈಗೊಂಡರು. 'ಟಿಐಎಫ್ಆರ್'ನಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ ರಾಮಕೃಷ್ಣ, ನ್ಯೂಯಾರ್ಕ್‌ನ ಕೊಲಂಬಿಯಾ ವಿವಿಯಲ್ಲಿ ಕೆಲಕಾಲ ಸೇವೆ ಸಲ್ಲಿಸಿದ್ದಾರೆ.

ನ್ಯೂಕ್ಲಿಯರ್ ಮ್ಯಾಗ್ನೆಟಿಕ್ ರೆಸೋನೆನ್ಸ್ ಮತ್ತು ಅಣ್ವಿಕ ಬಯೊಫಿಸಿಕ್ಸ್‌ನಲ್ಲಿ (ಮಾಲೆಕ್ಯುಲರ್ ಬಯೊಫಿಸಿಕ್ಸ್‌ನಲ್ಲಿ) ಮಹತ್ತರ ಕೆಲಸ ಮಾಡಿದ ಇವರಿಗೆ ಪದ್ಮಶ್ರೀ (2014) ಪ್ರಶಸ್ತಿ ದೊರೆತಿದೆ. ಬ್ರೂಕರ್ ಯುವ ವಿಜ್ಞಾನಿ ಪ್ರಶಸ್ತಿ, ನ್ಯಾಷನಲ್ ಸೈನ್ಸ್ ಅಕಾಡೆಮಿ ಯುವ ವಿಜ್ಞಾನಿ ಪ್ರಶಸ್ತಿ, ಪ್ರಫುಲ್ಲಚಂದ್ರ ರೆ ಸ್ಮರಣಾರ್ಥ ಪ್ರಶಸ್ತಿ ಸಂದಿವೆ. ಜ್ಯೂರಿಚ್‌ನಲ್ಲಿದ್ದಾಗ ನೊಬೆಲ್ ಬಹುಮಾನ ಗಳಿಸಿದ ಪ್ರೊಫೆಸರ್ ರಿಚರ್ಡ್ ಅರ್ನಸ್ಟ್ ಮತ್ತು ಪ್ರೊಫೆಸರ್ ಕುರ್ತ್ ವುಟ್ರಿಚ್ ಅವರೊಂದಿಗೆ ಕೆಲಸ ಮಾಡಿದ ಹೆಗ್ಗಳಿಕೆ ರಾಮಕೃಷ್ಣ ಅವರದು.

## ಟಿ.ಕೆ. ಚಂದ್ರಶೇಖರ್

ಭುವನೇಶ್ವರದ 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಷನ್ ಅಂಡ್ ರಿಸರ್ಚ್'ನ ನಿರ್ದೇಶಕರಾಗಿರುವ ಚಂದ್ರಶೇಖರ್ ಅವರ ಪೂರ್ಣ ಹೆಸರು ತಾವರಕೆರೆ ಕಲ್ಲಯ್ಯ ಚಂದ್ರಶೇಖರ್. ಜನವರಿ 1, 1956ರಂದು ಶಿವಮೊಗ್ಗದಲ್ಲಿ ಜನಿಸಿದರು. ಮೈಸೂರು ವಿವಿಯಲ್ಲಿ ಪದವಿ ಪೂರೈಸಿದರು. ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಗುರು ವಿ. ಕೃಷ್ಣನ್‌ರ ಮಾರ್ಗದರ್ಶನದಲ್ಲಿ ಅಜೈವಿಕ ಜೀವಿ ರಸಾಯನ (Bio InOrganic) ವಿಜ್ಞಾನ ವಿಷಯದಲ್ಲಿ ಪಿಎಚ್.ಡಿ. ಗಳಿಸಿದರು.

ಅಮೆರಿಕದ ಬೋಸ್ಟನ್, ಮೆಸಾಚುಸೆಟ್ಸ್ ಮತ್ತು ಮಿಚಿಗನ್ ಸ್ಟೇಟ್ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಸಂಶೋಧನಾ ಅಧ್ಯಯನ ಕೈಗೊಂಡರು. 1986ರಲ್ಲಿ ಭಾರತಕ್ಕೆ ಮರಳಿ ಕಾನ್ಪುರದ ಭಾರತೀಯ ತಂತ್ರಜ್ಞಾನ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ಕೆಲಸ ಪ್ರಾರಂಭಿಸಿದರು. ರಸಾಯನ ವಿಜ್ಞಾನದಲ್ಲಿನ ಪಾರ್ಫಿರಿನ್ಸ್ ಕಂಡುಹಿಡಿದದ್ದಕ್ಕಾಗಿ ಚಂದ್ರಶೇಖರ್ ಕೊಡುಗೆಯನ್ನು ಸ್ಮರಿಸಲಾಗುತ್ತದೆ. ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ, ಜೆ.ಸಿ. ಬೋಸ್ ನ್ಯಾಷನಲ್ ಫೆಲೊಶಿಪ್ ಮತ್ತು ಇಟಲಿಯ ಥರ್ಡ್ ವರ್ಲ್ಡ್ ಅಕಾಡೆಮಿ ಆಫ್ ಸೈನ್ಸಸ್ ಫೆಲೊ ಗೌರವಗಳು ಚಂದ್ರಶೇಖರ್ ಅವರಿಗೆ ದೊರಕಿವೆ.

## ಸಂಜೀವ ನಾಯಕ

ಲಕ್ನೋದ ನ್ಯಾಷನಲ್ ಬೊಟಾನಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಮುಖ್ಯ ವಿಜ್ಞಾನಿಯಾಗಿರುವ ಸಂಜೀವ ನಾಯಕ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದಲ್ಲಿ ಜನಿಸಿದವರು. ಕಲ್ಲುಹೂವು (lichen) ತಜ್ಞ ಎಂದೇ ಪ್ರಸಿದ್ಧರು. ಭಾರತದಾದ್ಯಂತ ಪ್ರವಾಸ ಮಾಡಿ, ಹಿಮಾಚಲ ಉತ್ತರ ಪ್ರದೇಶ ಗುಜರಾತ್ ಮತ್ತು ಪೂರ್ವ ಘಟ್ಟಗಳ ಕಲ್ಲು ಹೂಗಳ ಕುರಿತು ಸಂಶೋಧನೆ ಮಾಡಿದ್ದಾರೆ.

ಮೂರು ಬಾರಿ ಭೂಮಿಯ ದಕ್ಷಿಣ ಧ್ರುವ ಅಂಟಾರ್ಟಿಕಾಗೆ ಹೋಗಿ ಬಂದಿರುವ ನಾಯಕರು ಅಲ್ಲಿನ ವಾತಾವರಣದಲ್ಲಿ ಕಲ್ಲು ಹೂವುಗಳ ಬೆಳವಣಿಗೆಯ ಬಗ್ಗೆ ವಿಸ್ತೃತ ಅಧ್ಯಯನ ಮಾಡಿದ್ದಾರೆ. 28 ನವೀನ ಬಗೆಯ ಕಲ್ಲುಹೂವುಗಳನ್ನು ಪತ್ತೆ ಮಾಡಿರುವ ಸಂಜೀವ ನಾಯಕ, ಲಂಡನ್‌ನ 'ಲಿನ್ನೆಯಾನ್ ಸೊಸೈಟಿ'ಯ ಫೆಲೊ ಗೌರವಕ್ಕೆ ಪಾತ್ರರಾಗಿದ್ದಾರೆ.

ನಗರಗಳ ವಾಯುಮಾಲಿನ್ಯ ಅಳೆಯಲು ಕಲ್ಲುಹೂವುಗಳನ್ನು ಬಳಸುವ ವಿಧಾನವನ್ನು ಇವರು ರೂಪಿಸಿದ್ದಾರೆ. ಪಾಚಿ ಮತ್ತು ಶಿಲೀಂಧ್ರಗಳ ಸಂಯೋಗದಿಂದ ಹುಟ್ಟುವ ಸಸ್ಯಗಳಾಗಿರುವ




ಕಲ್ಲುಹೂವುಗಳು ವಾಯುಮಾಲಿನ್ಯದ ಪ್ರಮಾಣವನ್ನು ಅಳೆಯುವಲ್ಲಿ ನೆರವು ನೀಡುತ್ತವೆ. ಪೂರ್ವ ಮತ್ತು ಪಶ್ಚಿಮ ಹಿಮಾಲಯಗಳಲ್ಲಿ ಸುಮಾರು 2400 ಕಲ್ಲು ಹೂವುಗಳನ್ನು ಪತ್ತೆ ಮಾಡಲಾಗಿದೆ.

## ಶ್ರೀಕೃಷ್ಣ ಗೋಪಾಲರಾವ್ ದಾನಿ

ಗೆಳೆಯರ ಬಳಗದಲ್ಲಿ ಎಸ್.ಜಿ. ದಾನಿ ಎಂದೇ ಕರೆಸಿಕೊಳ್ಳುವ ಶ್ರೀಕೃಷ್ಣ ಗೋಪಾಲರಾವ್ ದಾನಿಯವರು ಹುಟ್ಟಿದ್ದು ಬೆಳಗಾವಿಯಲ್ಲಿ. ಮುಂಬೈ ವಿಶ್ವವಿದ್ಯಾಲಯದಿಂದ ಗಣಿತದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಪಿಎಚ್.ಡಿ ಅಧ್ಯಯನಕ್ಕಾಗಿ ಅಲ್ಲಿಯ ಟಾಟಾ ಮೂಲಭೂತ

## ಪ್ರಹ್ಲಾದ ರಾಮರಾವ್



ಚಿತ್ರಕೃಪೆ: ಹಿಲೆನ್

ಕ್ಷಿಪಣಿ ವಿಜ್ಞಾನಿ ಎಂದೇ ಖ್ಯಾತರಾಗಿದ್ದ ಪ್ರಹ್ಲಾದ ರಾಮರಾವ್ ಬೆಂಗಳೂರಿನವರು. ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ, ಭಾರತೀಯ ವಿಜ್ಞಾನ ಸಂಸ್ಥೆಯಿಂದ ಏರೊನಾಟಿಕಲ್ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವೀಧರರು. ಡಿಆರ್‌ಡಿಒ ಅಧೀನದ ಡಿಫೆನ್ಸ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಲ್ಯಾಬೊರೇಟರಿಗೆ ನಿರ್ದೇಶಕರಾಗಿ ಕೆಲಸ ಮಾಡಿದ ರಾಮರಾವ್, ರಾಕೆಟ್ ಮತ್ತು ಕ್ಷಿಪಣಿ ವಿಜ್ಞಾನದ ಕುರಿತು ಅಪಾರ ಜ್ಞಾನವುಳ್ಳವರಾಗಿದ್ದರು. ಹೈದರಾಬಾದ್‌ನ ಜವಾಹರಲಾಲ್ ನೆಹರೂ ಟೆಕ್ನಾಲಜಿಕಲ್ ಯೂನಿವರ್ಸಿಟಿಯಿಂದ ಪಿಎಚ್.ಡಿ ಪಡೆದ ನಂತರ ಭಾರತೀಯ ಬಾಹ್ಯಾಕಾಶ ಸಂಸ್ಥೆಗಾಗಿ ದುಡಿದರು. ವಿಕ್ರಂ ಸಾರಾಭಾಯಿ ಸ್ಪೇಸ್ ಸೆಂಟರ್ ಮತ್ತು ಬೆಂಗಳೂರಿನ ಏರೊನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದಾಗ, ಇಂಟೆಗ್ರೇಟೆಡ್ ಗೈಡೆಡ್ ಮಿಸೈಲ್ ಡೆವಲಪ್ಮೆಂಟ್ ಪ್ರೋಗ್ರಾಮ್‌ನಲ್ಲಿ ನಿರ್ಣಾಯಕ ನೇತೃತ್ವ ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ರಾಕೆಟ್ ಪ್ರೊಪಲ್ಷನ್, ಆನ್ ಬೋರ್ಡ್ ಏವಿಯೊನಿಕ್ಸ್, ಮಿ ಸೈಲ್ ಸಿಸ್ಟಮ್ಸ್, ರಾಡಾರ್ ವ್ಯವಸ್ಥೆ ಮತ್ತು ಹೈಪರ್ಸೋನಿಕ್ ವಿಮಾನಗಳ ಕುರಿತಾದ ವಿಶೇಷ ತಂತ್ರಜ್ಞಾನ ರೂಪಿಸಿದ್ದರು. ನೆಲದಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ 'ಆಕಾಶ್'ನ ನಿರ್ಮಾಣದಲ್ಲಿ ರಾವ್ ಮುಂಚೂಣಿಯಲ್ಲಿದ್ದರು. ಪೃಥ್ವಿ, ಅಗ್ನಿ ಮತ್ತು ನಾಗ್ ಕ್ಷಿಪಣಿಗಳ ವಿನ್ಯಾಸದಲ್ಲೂ ಇವರ ಕೊಡುಗೆ ಇತ್ತು. ಡಿಆರ್‌ಡಿಒ (ಡಿಫೆನ್ಸ್ ರಿಸರ್ಚ್ ಅಂಡ್ ಡೆವಲಪ್ಮೆಂಟ್ ಆರ್ಗನೈಸೇಷನ್ – DRDO) ರೂಪಿಸಿದ ತಂತ್ರಜ್ಞಾನವನ್ನು ವಾಣಿಜ್ಯೀಕರಣಗೊಳಿಸುವುದರಲ್ಲಿ ರಾವ್ ಪ್ರಮುಖ ಪಾತ್ರ ವಹಿಸಿದ್ದರು. ಭಾರತದ ಹಲವು ವಿಶ್ವವಿದ್ಯಾಲಯಗಳು ಮತ್ತು ವೈಜ್ಞಾನಿಕ ಸಂಸ್ಥೆಗಳು ಇವರನ್ನು ಪ್ರಶಸ್ತಿ ಪುರಸ್ಕಾರಗಳೊಂದಿಗೆ ಗೌರವಿಸಿವೆ. 2015ರಲ್ಲಿ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ.